# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯ ರಸ್ತೆ
ಹೊರಮಾವು ಗ್ರಾಮ ಬೆಂಗಳೂರು- 560113

ಸಂಖ್ಯೆ.ಬಿಬಿಎಂಪಿ/ಸ.ಕಂ.ಅ/ಹೊಉವ/ಪಿಆರ್/02 /19-20 ದಿನಾಂಕ:27.02.2019

**ದಿನಾಂಕ: 27.02.2019 ರಂದು ರಾಮಮೂರ್ತಿನಗರ ವಾರ್ಡ್ ನಂ.26 ರ ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ವಾರ್ಡ್ ಸಮಿತಿಯ ಸದಸ್ಯರು ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

ಉಪಸ್ಥಿತರು:

1. ಶ್ರೀ.ಎಂ.ಪದ್ಮಾವತಿ ಶ್ರೀನಿವಾಸ್, ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ಬಿಬಿಎಂಪಿ ಸದಸ್ಯರು ರಾಮಮೂರ್ತಿನಗರ ವಾರ್ಡ್ ಸಂಖ್ಯೆ-26.
2. ಶ್ರೀ. ರಮೇಶ್ ರಾಮಮೂರ್ತಿನಗರ ವಾರ್ಡ್ ಸಂಖ್ಯೆ-26 ಕಿರಿಯ ಅಭಿಯಂತರರು ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕರು.
3. ಶ್ರೀ.ಬಸವರಾಜ್.ಎಂ.ಜಿ ಅಸೆಸ್ಸರ್
4. ಶ್ರೀ.ವೆಂಕಟೇಶಮೂರ್ತಿ ಕಂದಾಯ ಅಧಿಕಾರಿ
5. ಶ್ರೀಮತಿ. ಉಷಾ ಮೂರ್ತಿ, ಪ್ರಿಯದರ್ಶಿನಿ ಬಡಾವಣೆ,
6. ಶ್ರೀ ಅಣ್ಣಪ್ಪ.ಸಿ.ಜಿ, ಸರ್.ಎಂ.ವಿ.ನಗರ
7. ಶ್ರೀ.ರಾಜೇಶ್.ಎಂ.ಎನ್, ವಿವೇಕಾನಂದ ರಸ್ತೆ
8. ಶ್ರೀಮತಿ.ಮಾಲ, ಕೆ.ಚನ್ನಸಂದ್ರ
9. ಶ್ರೀ. ವಿಶ್ವನಾಥ್, ಹಿರಿಯ ಆರೋಗ್ಯ ಅಧಿಕಾರಿಗಳು.
10. ಶ್ರೀಮತಿ.ಚಂದ್ರಕಲಾ.ಕೆ ಕಿರಿಯ ಆರೋಗ್ಯ ಅಧಿಕಾರಿ.

**ಕಿರಿಯ ಅಭಿಯಂತರರು ರಾಮಮೂರ್ತಿನಗರ ಹಾಗೂ ಕಾರ್ಯದರ್ಶಿಗಳು ಮತ್ತು ಸಂಚಾಲಕರದ ಶ್ರೀ.ರಮೇಶ್ ರವರು ಸಭೆಗೆ ಹಾಜರಾಗಿದ್ದ ಅಧ್ಯಕ್ಷರು/ಸದಸ್ಯರು/ಅಧಿಕಾರಿಗಳು ಹಾಗೂ ಸಿಬ್ಬಂದಿಯವರನ್ನು ಸ್ವಾಗತಿಸುತ್ತಾ, ಪರಿಚಯ ಮಾಡಿಕೊಂಡು ಈ ಕೆಳಕಂಡ ಅಂಶಗಳಿಗೆ ಸಂಬಂಧಪಟ್ಟಂತೆ ಚರ್ಚಿಸಿದರು.**

1976ರ ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮದ ಸೆಕ್ಷನ್ 13-ಎ ವಾರ್ಡು ಸಮಿತಿಗಳ ರಚನೆ ಅಂಗರಚನೆ, ಅವಧಿ, ಅಧಿಕಾರ ವ್ಯಾಪ್ತಿ ಇವುಗಳ ಬಗ್ಗೆ ಮತ್ತು ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಿರ್ದೇಶನ ನೀಡಿದೆ. ನಿಯಮ 13-ಎ(7) ರ ಪ್ರಕಾರ ವಾರ್ಡ್ ಸಮಿತಿಗಳ ಪ್ರಕಾರ್ಯ, ಕರ್ತವ್ಯ ಮತ್ತು ಕಾರ್ಯವಿಧಾನವನ್ನು ಗಮನಿಸಿ ರಾಜ್ಯ ಸರ್ಕಾರ ನಿಯಮಗಳನ್ನು ರಚಿಸತಕ್ಕದ್ದು, 1997ರ ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ (ವಾರ್ಡ್ ಸಮಿತಿ) ನಿಯಮದಲ್ಲಿ ವಾರ್ಡ್ ಸಮಿತಿ ರಚನೆ, ಸಮಿತಿ ಅಧ್ಯಕ್ಷರ ಚುನಾವಣೆ, ಸಮಿತಿಯ ಅಧಿಕಾರ ವ್ಯಾಪ್ತಿ, ಇತ್ಯಾದಿ ವಿಷಯಗಳ ಬಗ್ಗೆ ತಿಳಿಸಲಾಗಿದೆ. ಅದರಂತೆ ವಾರ್ಡ್ ನಂ.26 ರಲ್ಲಿ ಸಮಿತಿ ರಚನೆ ಮಾಡಿ ಸದಸ್ಯರುಗಳನ್ನು ನೇಮಕಮಾಡಲಾಗಿರುತ್ತದೆ. ಈ ವಾರ್ಡಿನ ಕುಂದುಕೊರತೆಗಳು ಬೀದಿದೀಪ/ಚರಂಡಿ/ಕಸವಿಲೇವಾರಿ ಬಗ್ಗೆ ನಾಗರೀಕರ ಸಮಿತಿ ರಚನೆ ಮಾಡಿ ಅನುದಾನ ಉಪಯೋಗದ ಬಗ್ಗೆ ಚರ್ಚಿಸಲು ಪ್ರಥಮ ಬಾರಿಗೆ ಸಭೆಯನ್ನು ಏರ್ಪಡಿಸಲಾಗಿರುತ್ತದೆ.

**ಶ್ರೀ.ಅಣ್ಣಪ್ಪ, ಸದಸ್ಯರು,**

ವಾರ್ಡ್ ಕಮಿಟಿ ಸದ್ಯಸರಾದ ಶ್ರೀ.ಅಣ್ಣಪ್ಪ ರವರು ಮಾತನಾಡುತ್ತಾ, ಬೀದಿ ದೀಪಗಳ ದುರಸ್ಥಿ ಹಾಗೂ ಸಮರ್ಪಕ ನಿರ್ವಹಣೆ ಬಗ್ಗೆ ತಿಳಿಯಪಡಿಸಿರುತ್ತಾರೆ. ಈ ಕುರಿತು ಅಧ್ಯಕ್ಷರು ಮಾತನಾಡಿ ನಿರ್ವಹಣೆ ಬಗ್ಗೆ ಗಮನ ಹರಿಸಲು ಆದಿಕಾರಿಗಳಿಗೆ ಸೂಚಿಸಿರುತ್ತಾರೆ.



Scanned by CamScanner

**ಶ್ರೀಮತಿ. ಉಷಾ,**

ವಾರ್ಡ್ ಕಮಿಟಿ ಸದ್ಯಸರಾದ **ಶ್ರೀಮತಿ.ಉಷಾ,** ರವರು ಮಾತನಾಡಿ ಎಲ್ಲಾ ಬಡಾವಣೆಗಳಲ್ಲಿ ಧೂಮಲೀಕರಣ ಮಾಡಲು ಕೋರಿರುತ್ತಾರೆ ಅದರಂತೆ ಅಧ್ಯಕ್ಷರು ಮಾತನಾಡಿ ಎಲ್ಲಾ ಬಡಾವಣೆಗಳಲ್ಲಿ ಸಮರ್ಪಕವಾಗಿ ಧೂಮಲೀಕರಣ ಮಾಡಲು ಆರೋಗ್ಯ ಅದಿಕಾರಿಗಳಿಗೆ ಕ್ರಮ ವಹಿಸಲು ಸೂಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಯಲ್ಲಿ ಎಲ್ಲೆದರಲ್ಲಿ ಕಸ ಬಿಸಾಡುವ ಬಗ್ಗೆ ದಂಡವನ್ನು ವಿಧಿಸಲು ಸಭೆಯಲ್ಲಿ ಎಲ್ಲಾ ಪ್ರಸ್ತಾಪಿಸಿದ್ದು ಈ ಕುರಿತು ಆರೋಗ್ಯ ಅದಿಕಾರಿಗಳು ದಂಡ ವಿದಿಸಲು ದಂಡ ಶುಲ್ಕದ ವಹಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಕಿರಿಯ ಆರೋಗ್ಯ ಅದಿಕಾರಿಗಳಿಗೆ ದಂಡ ಶುಲ್ಕದ ರಶೀದಿ ಪುಸ್ತಕವನ್ನು ಪಡೆಯಲು ಮೇಲಾಧಿಕಾರಿಗಳ ಗಮನಕ್ಕೆ ತರಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಶ್ರೀಮತಿ ಮಾಲಾ**

ಶ್ರೀಮತಿ.ಮಾಲಾ ಸದಸ್ಯರು ಮಾತನಾಡುತ್ತಾ, ಕನಕನಗರ ಹಾಗೂ ಕೆ.ಚನ್ನಸಂದ್ರದ ಬಡಾವಣೆಗಳಲ್ಲಿ ಕಸ ನಿರ್ವಹಣೆಯನ್ನು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಕೋರಿರುತ್ತಾರೆ.

ಇದಕ್ಕೆ ಪಾಲಿಕೆ ಸದಸ್ಯರು ಮಾತನಾಡಿ ಅಧಿಕಾರಿಗಳಿಗೆ ಕ್ರಮವಹಿಸಲು ಸೂಚಿಸಿರುತ್ತಾರೆ.

ಕಾರ್ಯದರ್ಶಿಗಳು ರಾಮಮೂರ್ತಿನಗರ ರವರು ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ವಂದೆನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಶ್ರೀ.ರಮೇಶ್
ಕಿರಿಯ ಅಭಿಯಂತರರು ರಾಮಮೂರ್ತಿನಗರ ವಾರ್ಡ್
ಸಂಖ್ಯೆ–26 ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶ್ರೀಮತಿ.ಎಂ.ಪದ್ಮಾವತಿ ಶ್ರೀನಿವಾಸ್,
ವಾರ್ಡ್ ಸಮಿತಿಯ ಅಧ್ಯಕ್ಷರು
ಹಾಗೂ ಬಿ.ಬಿ.ಎಂ.ಪಿ ಸದಸ್ಯರು
ರಾಮಮೂರ್ತಿನಗರ ವಾರ್ಡ್ ಸಂಖ್ಯೆ–26

ಪ್ರತಿಯನ್ನು:–
1.ಕೌನ್ಸಿಲ್ ಕಾರ್ಯದರ್ಶಿ ರವರ ಆವಗಾಹನೆಗೆ ಮಂಡಿಸಲಾಗಿದೆ.
2.ಕಛೇರಿ ಪ್ರತಿ

Scanned by CamScanner